ಕರ್ನಾಟಕ ವಿಧಾನ ಸಭೆ

ಗುರುವಾರ ೩ನೇ ಸೆಪ್ಟೆಂಬರ್ ೧೯೮೭

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು.—ಈಗ ಪ್ರಶ್ನೆಗಳು. ಮಾನ್ಯ ಶ್ರೀ ಬಿ. ಎಂ. ಇದಿನಬ್ಬನವರು ಪ್ರಶ್ನೆಯನ್ನು ಕೇಳ್ರಿ.

ಉಲ್ಲಾಳ ಕ್ಷೇತ್ರದಲ್ಲಿ ವಿದ್ಯುತ್ ಕೊರತೆ

೬೧ (೨೧೩) ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡ ಉಲ್ಲಾಳ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜು ಸರಿಯಾಗಿಲ್ಲದೆ ಗ್ರಾಮಾಂತರದಲ್ಲಿ ವಿದ್ಯುತ್ ಮಿಣಿ ಮಿಣಿಯಾಗಿ ಪ್ರಕಾಶವೇ ಇಲ್ಲದಿರುವುದಕ್ಕೆ ಕಾರಣವೇನು ?

ಆ) ವಿದ್ಯುತ್ ಹಗಲಿನಲ್ಲಿ ಅನೇಕ ಗಂಟೆಗಳ ಕಾಲ ಇರುವುದಿಲ್ಲ. ರಾತ್ರಿ ಕೂಡ ಹೆಚ್ಚು ಕಾಲ ವಿದ್ಯುತ್ ನಿಲುಗಡೆಯಾಗುತ್ತಿರುವುದರಿಂದ ಗ್ರಾಹಕರಿಗೆ ಒದಗುವ ಕಷ್ಟವನ್ನು ಪರಿಹರಿಸಲಾಗುವುದೇ ?

ಇ) ಕೊನಜೆಯಲ್ಲಿ ವಿದ್ಯುತ್ ಕೇಂದ್ರಕ್ಕೆ ಕೂಡಲೇ ಸಿಬ್ಬಂದಿಯನ್ನು ನೇಮಿಸಿ ವಿದ್ಯುತ್ ತೊಂದರೆ ನೀಗಿಸಲಾವುದೇ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ದಕ್ಷಿಣ ಕನ್ನಡದ ಉಲ್ಲಾಳ ಕ್ಷೇತ್ರದ ಕೆಲವು ಭಾಗಗಳಿಗೆ ಮಂಗಳೂರಿನ ಕುಲಶೇಖರ್ ಸ್ಟೇಷನ್ನಿಂದಲೂ ಉಳಿದ ಭಾಗಕ್ಕೆ ಕೊನಜೆಯ ಸ್ಟೇಷನ್ನಿನಿಂದಲೂ ವಿದ್ಯುತ್ ಪೂರೈಕೆಯಾಗುತ್ತಿದೆ. ಕುಲಶೇಖರ್‌ದಿಂದ ಉಲ್ಲಾಳಕ್ಕೆ ಹೋಗುವ ೧೧ ಕೆ. ವಿ. ಫೀಡರಿನ ಬ್ರೇಕರ್ ಜೂನ್ ೧೯೮೭ರಲ್ಲಿ ಕೆಟ್ಟು ಹೋಯಿತು. ಇದರಿಂದ ಉಲ್ಲಾಳದ ಈ ಭಾಗದ ಲೋಡನ್ನೂ ಕೊನಜೆ ಸ್ಟೇಷನ್ನಿನ ಮೇಲೆ ಹಾಕಿರುವುದರಿಂದಲೂ ಸ್ಟೇಷನ್ನು ಓವರ್ ಲೋಡಾಗಿರುವುದರಿಂದಲೂ ಕಡಿಮೆ ವೋಲ್ಟೇಜಿಗೆ ಕಾರಣವಾಗಿದೆ. ಕೆಟ್ಟಿರುವ ೧೧ ಕೆ. ವಿ. ಸ್ವಿಚ್ ಗೇರಿನ ಜಾಗದಲ್ಲಿ ಒಂದು ಹೊಸ ಸ್ವಿಚ್ ಗೇರ್ ಹಾಕಲಾಗುತ್ತಿದ್ದು ಇದು ಸೆಪ್ಟೆಂಬರ್ ೩೦ಗಳ ಕೊನೆಯೊಳಗೆ ಕಾರ್ಯನಿರತವಾಗುವ ನಿರೀಕ್ಷೆಯಿದೆ. ತದನಂತರ ಹಿಂದಿನಂತೆ ಸಮರ್ಪಕವಾಗಿ ವಿದ್ಯುತ್ ಪೂರೈಸಲಾಗುತ್ತದೆ.

ಆ) ಕೊನಜೆಯಲ್ಲಿರುವ ಸ್ಟೇಷನ್ನು ಸಿಬ್ಬಂದಿ ರಹಿತ ಸ್ಟೇಷನ್, ಇಲ್ಲಿನ ೧೧ ಕೆ. ವಿ. ಫೀಡರು ಟ್ರಿಪ್ ಆದರೆ ಮಂಗಳೂರಿನಿಂದ ಜನರು ಹೋಗಿ ಚಾರ್ಜ ಮಾಡಬೇಕಾಗಿದೆ. ಇದರಿಂದಾಗಿ ಇಂತಹ ಸಂದರ್ಭಗಳಲ್ಲಿ ವಿದ್ಯುತ್ ಸರಬರಾಜು ಪುನರ್ ಸ್ಥಾಪಿಸುವಲ್ಲಿ ವಿಳಂಬ ಉಂಟಾಗುತ್ತಿದೆ.

ಈ ಸ್ಟೇಷನಿನಲ್ಲಿ ಇನ್ನೊಂದು ಟ್ರಾನ್ಸ್‌ಫಾರ್ಮನ್ನು ಹಾಕುವ ಯೋಜನೆಯಿದ್ದು ಇದು ಕಾರ್ಯಗತವಾದ ಮೇಲೆ ಇದು (ವಿಳಂಬ) ಪರಹಾರವಾಗುತ್ತದೆ.

ಇ) ಕೊನಜೆ ಸ್ಟೇಷನ್‌ನಿನಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಹಾಕಿದ ಮೇಲೆ ಅಲ್ಲಿಗೆ ಕನಿಷ್ಟ ಮಟ್ಟದ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡುವ ಯೋಜನೆ ಮಂಡಲಿಗೆ ಇದೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಸಚಿವರು).—ಈಗ ಈ ಎಲ್ಲಾ ತೊಂದರೆಗಳು ಪರಿಹಾರವಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ, ಈಗ ಸಚಿವರೇ ನನ್ನ ಎಲ್ಲಾ ಪ್ರಶ್ನೆಗಳಿಗೂ ತೊಂದರೆ ಇದೆಯೆಂದು ಒಪ್ಪಿಕೊಳ್ಳುತ್ತಾರೆ. ವಿದ್ಯುತ್ ತೊಂದರೆ ಬಹಳವಾಗಿದೆ. ಶಾಲೆಯಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೂ ಕೂಡಾ ಬಹಳ ತೊಂದರೆಯಾಗಿದೆ, ದೀಪ ಕಾಣುವುದೇ ಇಲ್ಲ. ಚಿಮಣಿ ದೀಪ ಕ್ಕಿರತಲೂ ಕಡಿಮೆಯಾಗಿದೆ. ಆದರೂ ಸೆಪ್ಟಂಬರ್‌ನಲ್ಲಿ ಅದನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈಗ ರಾತ್ರಿಯೂ ವಿದ್ಯುತ್ ಕೊರತೆಯಾಗಿದೆ, ಇಡೀ ರಾತ್ರಿಯೂ ಇರುವುದಿಲ್ಲ. ಈ ರೀತಿ ಪಿತಕ್ಕೆ ಆಗುತಿದೆಯೆಂದು ಗೊತ್ತಾಗುತ್ತಿಲ್ಲ. ಬಹುಶಃ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವುದರಿಂದ, ಈ ರೀತಿ ತೊಂದರೆಯಾಗುತ್ತಿರಬಹುದು ಎಂದು ನನ್ನ ಭಾವನೆ. ಈ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೊನೆಜೆಯಲ್ಲಿರುವ ಸ್ಟೇಷನ್ನು ಸಿಬ್ಬಂದಿರಹಿತ ಸ್ಟೇಷನ್ ಆಗಿದೆ. ಅಲ್ಲಿ ನಮ್ಮ ಸಿಬ್ಬಂದಿ ಯಾರೂ ಇರುವುದಿಲ್ಲ, ಇಂತಹ ಅನೇಕ ಸ್ಟೇಷನ್‌ಗಳು ನಮ್ಮ ರಾಜ್ಯದಲ್ಲಿವೆ. ಅಲ್ಲಿಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರನ್ನು ಹಾಕಿದ ಮೇಲೆ ಸಿಬ್ಬಂದಿಯನ್ನು ಒದಗಿಸುತ್ತೇವೆ. ಅಲ್ಲಿ ವಿದ್ಯುತ್ ಪೂರೈಕೆ ನಿಂತಾಗ ಪಂಗಳೂರಿನಿಂದ ನಮ್ಮ ಸಿಬ್ಬಂದಿಹೋಗಿ ಕ್ರಮ ಕೈಕೊಳ್ಳಬೇಕಾದಕಾರಣ ಸ್ವಲ್ಪ ತಡವಾಗುತ್ತಿದೆ. ಇನ್ನು ಮುಂದೆ ಅಲ್ಲಿ ಈ ರೀತಿ ತೊಂದರೆ ಆಗದ ರೀತಿಯಲ್ಲಿ ನಾವು ನಿಗಾ ವಹಿಸಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ.—ಈಗ ಈ ಕೊನೆಜೆಯಲ್ಲಿನ ವಿದ್ಯುತ್ ಕೇಂದ್ರಕ್ಕೆ ತಾವು ಜಾಗ್ರತೆ ಸಿಬ್ಬಂದಿಯನ್ನು ನೇಮಕ ಮಾಡಬೇಕು ಮತ್ತು ಅಲ್ಲಿರುವ ವಿದ್ಯುತ್ತಿನ ತೊಂದರೆಯನ್ನು ಕೂಡಲೇ ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗ ಅಲ್ಲಿ ೧೧ ಕೆ.ವಿ. ಫೀಡರಿನ ಬ್ರೇಕರ್ ಜೂನ್ ೧೯೮೭ರಲ್ಲಿ ಕೆಟ್ಟು ಹೋಗಿದೆ, ಈಗ ಅಲ್ಲಿ ಹೊಸಸ್ವಿಚ್ ಗೇರ್ ಹಾಕಲಾಗುತ್ತಿದೆ ಈ ಕೆಲಸ ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿ ಮುಗಿಯುತ್ತದೆ ಎಂದು ಇಲ್ಲಿ ಹೇಳಿದ್ದರೂ ಸಹ ಈ ಕೆಲಸವನ್ನು ಇನ್ನೂ ಜಾಗ್ರತೆ ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

I.A.S. Officers In Public Sector Undertakings

62 (400) Sri Patamakki Ratnakar (Thirthahalli).—Will the Minister for large and medium Industries and power pleased to reply for the following question :—

a) The names of the different State Public Undertakings and the Public Undertakings in which there is joint investment by the Govt. and the Private Sector ?

b) The names of the I.A.S. Officers who are working as Chairman and Administrative Directors in State Public Undertakings in which they are working and the dates of their retirement ?

c) The number of them who have been given extension of service ?

d) Whether such extension of service would not be a burden on the Exchequer of the State ?